ಕರ್ನಾಟಕ ಸರ್ಕಾರ

**ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಕೆ.ಆರ್.ವೃತ್ತ, ಬೆಂಗಳೂರು-1**

ಸಂಖ್ಯೆ:ಸಿ1(4)/ಬಿ.ಆರ್.ಸಿ ಹುದ್ದೆ ಭರ್ತಿ-30/2016-17 ದಿನಾಂಕ: 22-03-2017.

**ಅತೀ ತುರ್ತು**

**ಜ್ಞಾಪನಾ**

**ವಿಷಯ** :2017-18ನೇ ಸಾಲಿಗೆ ಸರ್ವ ಶಿಕ್ಷಣ ಅಭಿಯಾನ ಕಾರ್ಯಕ್ರಮದ ಕ್ಷೇತ್ರ ಸಂಪನ್ಮೂಲ ಕೇಂದ್ರಗಳಿಗೆ ಕೇಂದ್ರ ಸಂಪನ್ಮೂಲ ಸಮನ್ವಯಾಧಿಕಾರಿಗಳ (ಬಿ.ಆರ್.ಸಿ) ಹುದ್ದೆಗಳನ್ನು ಭರ್ತಿ ಮಾಡುವ ಸಂಬಂದ ಲಿಖಿತ ಪರೀಕ್ಷೆಯನ್ನು ನಡೆಸುವ ಬಗ್ಗೆ.

**ಉಲ್ಲೇಖ** :ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ – ಕರ್ನಾಟಕ ಬೆಂಗಳೂರು ಇವರ ಅಧಿಕೃತ ಜ್ಞಾಪನ ಸಂಖ್ಯೆ: ಸಶಿಅ/ಆ/ಸಿ5-ಬಿಆರ್‌ಸಿ/ಲಿಖಿತ ಪರೀಕ್ಷೆ/2017. ದಿನಾಂಕ 09-03-2017.

-&&&&&-

ಉಲ್ಲೇಖಿತ ಜ್ಞಾಪನದ ಮಾರ್ಗಸೂಚಿಯ ಪ್ರತಿಯನ್ನು ಇದರೊಂದಿಗೆ ಲಗತ್ತಿಸಲಾಗಿದೆ. ಮಾರ್ಗ ಸೂಚಿಯಂತೆ 2017ನೇ ಸಾಲಿಗೆ ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿಗಳ[ಬಿ.ಆರ್.ಸಿ] ಹುದ್ದೆಗಳಿಗೆ ಲಿಖಿತ ಪರೀಕ್ಷೆ-ನಡೆಸುವ ಬಗ್ಗೆ ಈ ಕೆಳಕಂಡ ಸೂಚನೆಗಳನ್ನು ಪಾಲಿಸಲು ತಿಳಿಸಿದೆ.

***ನಾಲ್ಕು ವಿಭಾಗದ ,ವಿಭಾಗೀಯ ಜಂಟಿ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರು ನಿರ್ವಹಿಸಬೇಕಾದ ಪರೀಕ್ಷಾ ಕರ್ತವ್ಯಗಳು:***

1. ಬಿಆರ್‌ಸಿ ಪರೀಕ್ಷೆ-2017ನ್ನು ನಡೆಸಲಾಗುವ ಪರೀಕ್ಷಾ ಕೇಂದ್ರಗಳ ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ. ಅದರಂತೆ ಆಯಾ ವಿಭಾಗದಲ್ಲಿನ ಪರೀಕ್ಷಾ ಕೇಂದ್ರಗಳನ್ನು ಪರೀಕ್ಷೆ ನಡೆಸಲು ಸಜ್ಜುಗೊಳಿಸುವಲ್ಲಿ ಸೂಕ್ತ ಕ್ರಮ ಕೈಗೊಳ್ಳುವುದು.
2. ಪರೀಕ್ಷೆಯನ್ನು ದಿನಾಂಕ 26-03-2017ರ ಭಾನುವಾರ ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 12.30 ರವರೆಗೆ ರಾಜ್ಯದಾದ್ಯಂತೆ ಏಕ ಕಾಲಕ್ಕೆ ನಡೆಸಲು ನಿರ್ಧರಿಸಲಾಗಿದೆ. ಅದರಂತೆ ಆಯಾ ವಿಭಾಗದಲ್ಲಿನ ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲಿ ಏಕ ಕಾಲಕ್ಕೆ ಪರೀಕ್ಷೆ ನಡೆಯುವಂತೆ ನಿಗಾ ವಹಿಸುವುದು.
3. 4 ವಿಭಾಗದ ವಿಭಾಗೀಯ ಜಂಟಿ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರು ಆಯಾ ವಿಭಾಗದ ಜಿಲ್ಲೆಗಳಲ್ಲಿನ ಪರೀಕ್ಷಾ ಕೇಂದ್ರಗಳ ನೋಡಲ್ ಅಧಿಕಾರಿಯಾಗಿದ್ದು ಇವರು ಸಂಪೂರ್ಣ ಪರೀಕ್ಷಾ ಕಾರ್ಯ ಚಟುವಟಿಕೆಗಳ ಮೇಲುಸ್ತುವಾರಿ ನೋಡಿಕೊಳ್ಳುವುದು.
4. ಲಿಖಿತ ಪರೀಕ್ಷೆಯನ್ನು ನಡೆಸಿದ ನಂತರ, ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನಕ್ಕಾಗಿ ನಿರ್ದೇಶಕರು (ಪರೀಕ್ಷೆಗಳು), ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು ಇವರಿಗೆ ಮುದ್ದಾಂ ತಲುಪಿಸುವಲ್ಲಿ ಕೂಡಲೇ ಸೂಕ್ತ ಕ್ರಮ/ನಿಗಾ ವಹಿಸುವುದು.
5. ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ಮೂಲಕ ಪರೀಕ್ಷಾ ಕೇಂದ್ರಗಳಿಗೆ ತಲುಪಿಸಲಾಗುವ ಪ್ರಶ್ನೆ ಪತ್ರಿಕೆಗಳ ಸಂಖ್ಯೆಯು ಇಂಡೆಂಟ್‌ನೊಂದಿಗೆ ತಾಳೆಹೊಂದಿರುವ ಬಗ್ಗೆ ಖಚಿತಪಡಿಸಿಕೊಳ್ಳುವುದು.
6. ಉಪನಿರ್ದೇಶಕರು (ಆಡಳಿತ), ಇವರೊಂದಿಗೆ ಚರ್ಚಿಸಿ ಎಲ್ಲಾ ಅಭ್ಯರ್ಥಿಗಳಿಗೆ ಪರೀಕ್ಷಾ ಕೇಂದ್ರ ಮತ್ತು ದಿನಾಂಕದ ಬಗ್ಗೆ ಮಾಹಿತಿ ತಲುಪಿರುವ ಬಗ್ಗೆ ಖಚಿತಪಡಿಸಿಕೊಳ್ಳುವುದು.
7. ಆಯಾ ವಿಭಾಗದ ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷಾ ಕಾರ್ಯವು ಯಾವುದೇ ಅಡೆ-ತಡೆ, ಗೊಂದಲಗಳಿಲ್ಲದೇ ಸುಸೂತ್ರವಾಗಿ ನಡೆಯುವಂತೆ ನೋಡಿಕೊಳ್ಳುವಲ್ಲಿ ಸಂಪೂರ್ಣ ಜವಾಬ್ದಾರಿ ವಹಿಸಿಕೊಳ್ಳುವುದು.

***ಜಿಲ್ಲಾ ಉಪನಿರ್ದೇಶಕರು(ಆಡಳಿತ), ಇವರ ಹಂತದಲ್ಲಿ ವಹಿಸಬೇಕಾದ ಕ್ರಮಗಳು:***

1. ಬಿ.ಆರ್.ಸಿ ಪರೀಕ್ಷೆ-2017ನ್ನು ಬರೆಯಲು ಸಲ್ಲಿಸಿರುವ ಅರ್ಜಿಗಳನ್ನು ಪರಿಶೀಲಿಸಿ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಸಿದ್ಧಪಡಿಸಿ ಅದರ ಸಾಫ್ಟ್ ಮತ್ತು ಹಾರ್ಡ್ ಕಾಪಿಗಳನ್ನು ಸಂಬಂಧಿಸಿದ ಆಯುಕ್ತಾಲಯಗಳಿಗೆ ಸಲ್ಲಿಸುವುದು.

2. ಹಾಲಿ ಬಿ.ಆರ್.ಸಿ ಹುದ್ದೆಗಳಲ್ಲಿ ಸೇವೆ ಸಲ್ಲಿಸುತ್ತಿರುವವರ ಸೇವಾ ವಿವರಗಳನ್ನು ಆಯುಕ್ತರ ಕಛೇರಿ, ಬೆಂಗಳೂರು ಇಲ್ಲಿಗೆ ಕೂಡಲೇ ಸಲ್ಲಿಸುವುದು.
3. ದಿನಾಂಕ 31-03-2017ರಲ್ಲಿದ್ದಂತೆ ಜಿಲ್ಲೆಯಲ್ಲಿನ ಸರ್ಕಾರಿ ಪ್ರೌಢ ಶಾಲಾ ಮುಖ್ಯಶಿಕ್ಷಕರು ಹಾಗೂ ತತ್ಸಮಾನ ಗ್ರೂಪ್-ಬಿ ವೃಂದದ ಖಾಲಿ ಹುದ್ದೆಗಳ ಮಾಹಿತಿಯನ್ನು ಆಯಾ ಆಯುಕ್ತಾಲಯಗಳಿಗೆ ದಿನಾಂಕ 24-03-2017ರ ಒಳಗಾಗಿ ಸಲ್ಲಿಸುವುದು.
4. ಲಗತ್ತಿಸಿರುವ ಅನುಬಂಧದಲ್ಲಿ ಬಿಆರ್‌ಸಿ ಪರೀಕ್ಷೆಗಳನ್ನು ನಡೆಸುವ ಪರೀಕ್ಷಾ ಕೇಂದ್ರಗಳ ವಿವರ ಮತ್ತು ಕೇಂದ್ರಗಳಿಗೆ ಲಗತ್ತಿಸಿರುವ ಜಿಲ್ಲೆಗಳ ವಿವರಗಳನ್ನು ಸೂಚಿಸಲಾಗಿದೆ. ಅದರನ್ವಯ ಆಯಾ ಜಿಲ್ಲೆಯ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಅವರ ಭಾವಚಿತ್ರದೊಂದಿಗೆ ದೃಢೀಕರಿಸಿ ಪರೀಕ್ಷಾ ಕೇಂದ್ರಗಳಿಗೆ ಕೂಡಲೇ ರವಾನಿಸುವುದು. ಇದಕ್ಕೆ ಬೇಕಾದ ಭಾವಚಿತ್ರಗಳನ್ನು ಅಭ್ಯರ್ಥಿಗಳಿಂದ ಪಡೆದುಕೊಳ್ಳುವುದು.
5. ಪರೀಕ್ಷೆ ಬರೆಯುತ್ತಿರುವ ಅಭ್ಯರ್ಥಿಗಳಿಗೆ ಇಲಾಖಾ ವತಿಯಿಂದ ಯಾವುದೇ ಪ್ರಯಾಣ ಭತ್ಯೆ ಅಥವಾ ದಿನ ಭತ್ಯೆಯನ್ನು ನೀಡಲಾಗುವುದಿಲ್ಲ ಎಂಬ ಅಂಶವನ್ನು ಅಭ್ಯರ್ಥಿಗಳಿಗೆ ತಿಳಿಯಪಡಿಸುವುದು.
6. ಅಭ್ಯರ್ಥಿಗಳಿಗೆ ಪರೀಕ್ಷಾ ಕೇಂದ್ರದ ಬಗ್ಗೆ ಮತ್ತು ವೇಳಾಪಟ್ಟಿಯ ಬಗ್ಗೆ ಸೂಕ್ತ ಮಾಹಿತಿಯನ್ನು ಸಕಾಲದಲ್ಲಿ ನೀಡುವುದು ಹಾಗೂ ಅಭ್ಯರ್ಥಿಗಳು ಪರೀಕ್ಷಾ ಕೇಂದ್ರಕ್ಕೆ ತಮ್ಮ ಗುರುತಿನ ಚೀಟಿಯೊಂದಿಗೆ ಹೋಗಲು ಸೂಚಿಸುವುದು.
7. ಅಭ್ಯರ್ಥಿಗಳ ಸೇವಾನುಭವ ಮತ್ತು ವಿದ್ಯಾರ್ಹತೆಗೆ ನಿಗಧಿಪಡಿಸಿರುವಂತೆ ಅವರ ಅರ್ಹತೆಗೆ ಅನುಸಾರವಾಗಿ ಅಂಕಗಳನ್ನು ನೀಡಿ ತಾತ್ಕಾಲಿಕ ಪಟ್ಟಿ ಪ್ರಕಟಿಸಿ ಆಕ್ಷೇಪಣೆಗಳಿದ್ದಲ್ಲಿ ಸ್ವೀಕರಿಸಿ, ನಿಯಮಾನುಸಾರ ಪರಿಗಣಿಸಿದ ನಂತರ ಅಂತಿಮ ಅರ್ಹತಾ ಪಟ್ಟಿಯನ್ನು ಪ್ರಕಟಿಸಿ ಅದರ ಪ್ರತಿಯನ್ನು ಕೂಡಲೇ ಈ ಕಛೇರಿಗೆ ಸಲ್ಲಿಸಲು ತಿಳಿಸಿದೆ.
8. ಅಭ್ಯರ್ಥಿಗಳ ಪ್ರವೇಶ ಪತ್ರಗಳನ್ನು ಪರೀಕ್ಷಾ ಕೇಂದ್ರಗಳಿಗೆ ನೇರವಾಗಿ ರವಾನಿಸಲಾಗುವುದು. ಅವುಗಳನ್ನು ಅಭ್ಯರ್ಥಿಗಳಿಗೆ ಅಲ್ಲಿಯೇ ವಿತರಣೆ ಮಾಡಲು ತಿಳಿಸಲಾಗಿದೆ.

***ನಿಗಧಿಪಡಿಸಿರುವ ಪರೀಕ್ಷಾ ಕೇಂದ್ರಗಳ ಸಿ.ಟಿ.ಇ / ಡಯಟ್ ಪ್ರಾಂಶುಪಾಲರು ಪಾಲಿಸಬೇಕಾದ ಕ್ರಮಗಳು:***

1. ಅಭ್ಯರ್ಥಿಗಳ ಪ್ರವೇಶ ಪತ್ರಗಳನ್ನು ಪ್ರಶ್ನೆ ಪತ್ರಿಕೆಗಳೊಂದಿಗೆ ಪರೀಕ್ಷಾ ಕೇಂದ್ರಗಳಿಗೆ ರವಾನಿಸಲಾಗುವುದು. ಪ್ರವೇಶ ಪತ್ರಗಳನ್ನು ಅಭ್ಯರ್ಥಿಗಳಿಗೆ ಪರೀಕ್ಷೆ ನಡೆಯುವುದಕ್ಕೆ ಮೊದಲು ಅಲ್ಲಿಯೇ ವಿತರಣೆ ಮಾಡುವುದು.
2. ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ಮೂಲಕ ಪರೀಕ್ಷಾ ಕೇಂದ್ರಗಳಿಗೆ ತಲುಪಿಸಲಾಗುವ ಪ್ರಶ್ನೆ ಪತ್ರಿಕೆಗಳ ಸಂಖ್ಯೆಗಳನ್ನು ಇಂಡೆಂಟ್‌ನೊಂದಿಗೆ ತಾಳೆಮಾಡಿಕೊಂಡು ಪಡೆಯುವುದು.
3. ಅರ್ಹ ಆಭ್ಯರ್ಥಿಗಳ ಪಟ್ಟಿಯೊಂದಿಗೆ ಅಭ್ಯರ್ಥಿಗಳ ಭಾವಚಿತ್ರಗಳನ್ನು ದೃಢೀಕರಿಸಿ ಆಯಾ ಜಿಲ್ಲೆಗಳ ಉಪನಿರ್ದೇಶಕರು (ಆಡಳಿತ) ಇವರು ಕಳುಹಿಸಿರುವ ಪಟ್ಟಿಯೊಂದಿಗೆ ತಾಳೆಮಾಡಿಕೊಂಡು ಅಥವಾ ಅಭ್ಯರ್ಥಿಗಳ ಬಳಿ ಇರುವ ಇಲಾಖಾ ಗುರುತಿನ ಚೀಟಿಯೊಂದಿಗೆ ಪರಿಶೀಲಿಸಿ ದೃಡಪಡಿಸಿಕೊಂಡು ಅಭ್ಯರ್ಥಿಗಳಿಗೆ ಪರೀಕ್ಷೆ ಬರೆಯಲು ಅನುವು ಮಾಡಿಕೊಡುವುದು.
4. ಪರೀಕ್ಷೆಯನ್ನು ದಿನಾಂಕ 26-03-2017ರ ಭಾನುವಾರ ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 12.30 ರವರೆಗೆ ನಡೆಸಿ ನಂತರ ಉತ್ತರ ಪತ್ರಿಕೆಗಳ ಮೊಹರು ಮಾಡಿದ ಬಂಡಲ್‌ಗಳನ್ನು ಆ ದಿನವೇ ನಿರ್ದೇಶಕರು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು ಇವರಿಗೆ ಮುದ್ದಾಂ ತಲುಪಿಸಿ ಸೂಕ್ತ ಸ್ವೀಕೃತಿ ಪಡೆದುಕೊಳ್ಳುವುದು.

ಮೇಲೆ ನೀಡಿರುವ ಸೂಚನೆಗಳನ್ನು ತಪ್ಪದೇ ಪಾಲಿಸಿ ಆಯಾ ಅಧಿಕಾರಿಗಳು ಪರೀಕ್ಷಾ ಕಾರ್ಯವು ಸುಗಮವಾಗಿ ನಡೆಯುವಲ್ಲಿ ಪೂರ್ಣ ಸಹಕಾರ ನೀಡಲು ಸೂಚಿಸಿದೆ.

(ಎಸ್.ಕಾತ್ಯಾಯನಿದೇವಿ)
ಜಂಟಿ ನಿರ್ದೇಶಕರು(ಆಡಳಿತ)
21-03-17 22.3.17

**ಇವರಿಗೆ:**

1. ವಿಭಾಗೀಯ ಸಹ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು, ಧಾರವಾಡ & ಕಲ್ಬುರ್ಗಿ.
2. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು (ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ, ಪ್ರಾಂಶುಪಾಲರು, ಡಯಟ್, ಬೆಂಗಳೂರು ಗ್ರಾಮಾಂತರ, ಮೈಸೂರು, ಧಾರವಾಡ & ಕಲ್ಬುರ್ಗಿ ಜಿಲ್ಲೆಗಳು.

**ಪ್ರತಿಯನ್ನು :**

ನಿರ್ದೇಶಕರು(ಪರೀಕ್ಷೆಗಳು), ಕ.ಪ್ರೌ.ಶಿ.ಪ.ಮಂಡಳಿ, ಮಲ್ಲೇಶ್ವರಂ, ಬೆಂಗಳೂರು ಇವರಿಗೆ ಮಾಹಿತಿಗಾಗಿ.

| ಕ್ರಸಂ | ಪರೀಕ್ಷಾ ಕೇಂದ್ರದ ವಿವರ | | ಟ್ಯಾಗ್ ಮಾಡಿರುವ ಜಿಲ್ಲೆಗಳ ಹೆಸರು | ಅಭ್ಯರ್ಥಿಗಳ ಸಂಖ್ಯೆ | ಒಟ್ಟು ಕೇಂದ್ರವಾರು ಅಭ್ಯರ್ಥಿಗಳು | ಪ್ರಶ್ನೆ ಪತ್ರಿಕೆ ಬೇಡಿಕೆ | ಒಟ್ಟು ಕೇಂದ್ರವಾರು ಪ್ರಶ್ನೆಪತ್ರಿಕೆ ಬೇಡಿಕೆ |
|---|---|---|---|---|---|---|---|
| 1 | ಡಯಟ್, ಬೆಂಗಳೂರು ಗ್ರಾಮಾಂತರ ಜಿಲ್ಲೆ, ರಾಜಾಜಿನಗರ, ಬೆಂಗಳೂರು-10 | 1. | ಬೆಂಗಳೂರು ದಕ್ಷಿಣ | 01 | 34 | 40 | |
| | | 2. | ಬೆಂಗಳೂರು ಉತ್ತರ | 00 | | | |
| | | 3. | ಬೆಂಗಳೂರು ಗ್ರಾಮಾಂತರ | 06 | | | |
| | | 4. | ಚಿಕ್ಕಬಳ್ಳಾಪುರ | 06 | | | |
| | | 5. | ಕೋಲಾರ | 02 | | | |
| | | 6. | ಮಧುಗಿರಿ | 03 | | | |
| | | 7. | ರಾಮನಗರ | 07 | | | |
| | | 8. | ತುಮಕೂರು | 02 | | | |
| | | 9. | ಶಿವಮೊಗ್ಗ | 06 | | | |
| | | 10. | ಚಿತ್ರದುರ್ಗ | 01 | | | |
| | | 11. | ದಾವಣಗೆರೆ | 00 | | | |
| 2 | ಡಯಟ್, ಮೈಸೂರು | 12. | ಮೈಸೂರು | 01 | 12 | 15 | |
| | | 13. | ಚಾಮರಾಜನಗರ | 00 | | | |
| | | 14. | ಚಿಕ್ಕಮಗಳೂರು | 02 | | | |
| | | 15. | ಹಾಸನ | 03 | | | |
| | | 16. | ಕೊಡಗು | 00 | | | |
| | | 17. | ಮಂಡ್ಯ | 02 | | | |
| | | 18. | ದಕ್ಷಿಣ ಕನ್ನಡ | 01 | | | |
| | | 19. | ಉಡುಪಿ | 03 | | | |
| 3 | ಡಯಟ್, ಧಾರವಾಡ | 20. | ಧಾರವಾಡ | 00 | 26 | 30 | |
| | | 21. | ಬಾಗಲಕೋಟೆ | 05 | | | |
| | | 22. | ಬಿಜಾಪುರ | 08 | | | |
| | | 23. | ಗದಗ | 02 | | | |
| | | 24. | ಹಾವೇರಿ | 02 | | | |
| | | 25. | ಚಿಕ್ಕೋಡಿ | 08 | | | |
| | | 26. | ಬೆಳಗಾವಿ | 00 | | | |
| | | 27. | ಸಿರಸಿ | 01 | | | |
| | | 28. | ಉತ್ತರ ಕನ್ನಡ | 00 | | | |
| 4 | ಸರ್ಕಾರಿ ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ, ಐವಾನ್-ಷಾ-ಹಿ ಬಡಾವಣೆ, ಕಲ್ಬುರ್ಗಿ ಜಿಲ್ಲೆ | 29. | ಕಲ್ಬುರ್ಗಿ | 04 | 18 | 25 | |
| | | 30. | ಯಾದಗಿರಿ | 01 | | | |
| | | 31. | ಬೀದರ್ | 00 | | | |
| | | 32. | ಬಳ್ಳಾರಿ | 07 | | | |
| | | 33. | ರಾಯಚೂರು | 04 | | | |
| | | 34. | ಕೊಪ್ಪಳ | 02 | | | |
| | ಒಟ್ಟು | | | | 90 | 110 | |

(ಎಸ್.ಕಾತ್ಯಾಯಿನಿದೇವಿ)
ಜಂಟಿ ನಿರ್ದೇಶಕರು[ಆಡಳಿತ]

22.03.17 22.3.17

22/3/17